ನಮ್ಮ ಸ್ವಾಧೀನಕ್ಕೆ ತಂದುಕೊಳ್ಳುವುದೇ ಪ್ರತ್ಯಾಹಾರ. ಪ್ರತ್ಯಾಹಾರದ ಸಾಧನೆಯನ್ನು ಕೆಲಕಾಲ ಮಾಡಿದ ನಂತರ ಮುಂದಿನ ಮೆಟ್ಟಿಲಿಗೆ ಹೋಗಬೇಕು. ಅದೇ **ಧಾರಣ**. ಧಾರಣವೆಂದರೆ, ಒಂದು ನಿರ್ದಿಷ್ಟ ವಸ್ತುವಿನ ಮೇಲೆ ಅಥವಾ ನಿರ್ದಿಷ್ಟ ದೇಹಭಾಗದ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಮನಸ್ಸು ಯಾವುದೋ ಒಂದು ಭಾಗಕ್ಕೆ ಸೀಮಿತಗೊಂಡಾಗ ಅದನ್ನು ಧಾರಣ ಎನ್ನುತ್ತೇವೆ. ಅದರೊಂದಿಗೆ ಸ್ವಲ್ಪ ಕಲ್ಪನಾಶಕ್ತಿಯನ್ನೂ ಬಳಸಬೇಕು. ಉದಾಹರಣೆಗೆ, ಹೃದಯ ಭಾಗದಲ್ಲಿ ಮನಸ್ಸನ್ನು ಇರಿಸುವುದು ಕಷ್ಟ. ಆದರೆ, ಅಲ್ಲಿ ಕಮಲವನ್ನು ಕಲ್ಪಿಸಿಕೊಂಡು, ಅದರಲ್ಲಿ ಮನಸ್ಸನ್ನು ಏಕೀಕರಿಸುವುದು ಸುಲಭ. ಇದೇ ಧಾರಣದ ವಿಧಾನ.

## ಧ್ಯಾನ ಮತ್ತು ಸಮಾಧಿ

ಪ್ರತ್ಯಾಹಾರ ಮತ್ತು ಧಾರಣಗಳಿಂದ ಮನಸ್ಸನ್ನು ಯಾವುದಾದರೂ ಆಂತರಿಕ ಅಥವಾ ಬಾಹ್ಯವಸ್ತುವಿನೆಡೆಗೆ ಕೇಂದ್ರೀಕರಿಸುವ ಅಭ್ಯಾಸ ಮಾಡಬೇಕು. ಅನಂತರ, ಆ ವಸ್ತುವಿನೆಡೆಗೆ ಮನಸ್ಸನ್ನು ನಿರಂತರವಾಗಿ ಹರಿಯಿಸುವ ಶಕ್ತಿ ಬರುತ್ತದೆ. ಈ ಸ್ಥಿತಿಯನ್ನೇ **ಧ್ಯಾನ** ಎನ್ನುವುದು. ಧ್ಯಾನಸ್ಥಿತಿಯ ಮಹತ್ವದ ಬಗ್ಗೆ ಸ್ವಾಮೀಜಿಯವರು ಹೇಳುವ ಮಾತುಗಳು ಅವರ ಸ್ವಾನುಭವದ ನುಡಿಗಳಂತೆ ತೋರುತ್ತವೆ: "ಈ ಧ್ಯಾನಸ್ಥಿತಿಯು ಅಸ್ತಿತ್ವದ ಪರಮಾವಸ್ಥೆ. ಎಲ್ಲಿಯವರೆಗೆ ಆಸೆ ಇರುವುದೋ ಅಲ್ಲಿಯವರೆಗೆ ನಿಜವಾದ ಸಂತೋಷ ಇರುವುದಿಲ್ಲ. ಧ್ಯಾನಸ್ಥಿತಿಯಲ್ಲಿ ಸಾಕ್ಷಿಯಾಗಿ ವಸ್ತುಗಳನ್ನು ಪರೀಕ್ಷಿಸುವುದೇ ನಮಗೆ ನಿಜವಾದ ಸಂತೋಷವನ್ನು ಮತ್ತು ಸುಖವನ್ನು ಕೊಡುವುದು. ಪ್ರಾಣಿಗಳಿಗೆ ಸುಖ ಇಂದ್ರಿಯದಲ್ಲಿದೆ; ಮಾನವನಿಗೆ ಬುದ್ಧಿಯಲ್ಲಿ ಇದೆ; ಆದರೆ ಮೇಲೆ ಹೇಳಿದ ಧ್ಯಾನಸ್ಥಿತಿಗೆ ಏರಿದ ಜೀವಿಗೆ ಮಾತ್ರವೇ ಜಗತ್ತು ನಿಜವಾಗಿಯೂ ಸುಂದರವಾಗಿ ಕಾಣುವುದು. ಯಾರು ಏನನ್ನೂ ಆಶಿಸುವುದಿಲ್ಲವೋ, ಅವರಿಗೆ ಪ್ರಕೃತಿಯ ನಾನಾ ಬದಲಾವಣೆಗಳು ಸೌಂದರ್ಯ ಮತ್ತು ಭವ್ಯತೆಯ ದೃಶ್ಯಗಳಾಗಿ ಕಂಡು ಬರುತ್ತವೆ."

ಧ್ಯಾನವು ಹೇಗೆ ಕ್ರಮಕ್ರಮವಾಗಿ ಉನ್ನತ ಹಂತಗಳನ್ನು ತಲುಪಬೇಕು ಎನ್ನುವುದನ್ನು ಕೂಡ ಸ್ವಾಮೀಜಿ ಸೊಗಸಾಗಿ ವರ್ಣಿಸುತ್ತಾರೆ: ಹಿಂದಿನ ಸಿದ್ಧತೆಗಳ ಪರಿಣಾಮವಾಗಿ ಮನಸ್ಸು ದೃಢವಾದ ನಿಯಂತ್ರಣಕ್ಕೆ ಒಳಪಡಬೇಕು. ಆ ಮೂಲಕ ಸೂಕ್ಷ್ಮ ಇಂದ್ರಿಯ ಗ್ರಹಣಶಕ್ತಿಯನ್ನು ಪಡೆಯಬೇಕು. ಇದಾದಮೇಲೆ ಧ್ಯಾನದಲ್ಲಿ ತೊಡಗಬೇಕು. ಧ್ಯಾನವು ಸ್ಥೂಲವಸ್ತುಗಳಿಂದ ಮೊದಲಾಗಿ, ಕ್ರಮೇಣ ಸೂಕ್ಷ್ಮ ಸೂಕ್ಷ್ಮವಾಗಿ, ವಸ್ತುರಹಿತವಾಗುವವರೆಗೂ ಏರಬೇಕು. ಸಂವೇದನೆಯ ಬಾಹ್ಯ ಕಾರಣಗಳನ್ನು ನೋಡುವುದರಲ್ಲಿ ಮನಸ್ಸನ್ನು ಮೊದಲು ತೊಡಗಿಸಬೇಕು. ಅನಂತರ ಆಂತರಿಕ ಚಲನೆ, ತದನಂತರ ತನ್ನದೇ ಆದ ಪ್ರತಿಕ್ರಿಯೆ – ಇವುಗಳ ಮೇಲೆ ಮನಸ್ಸನ್ನು ನಿಲ್ಲಿಸಬೇಕು. ಆಗ ಎಲ್ಲ ಬಗೆಯ ಸೂಕ್ಷ್ಮ ವಸ್ತುಗಳನ್ನೂ ನೋಡುವ ಶಕ್ತಿ ಮನಸ್ಸಿಗೆ ಬರುತ್ತದೆ. ಆಗ ಸರ್ವವಿಷಯಗಳ ಜ್ಞಾನವೂ ಯೋಗಿಯ ಅಧೀನವಾಗುತ್ತದೆ.

ಸಮಾಧಿಯ ಸ್ವರೂಪವನ್ನು ಸ್ವಾಮೀಜಿ ಸ್ವಲ್ಪ ವಿಸ್ತಾರವಾಗಿಯೇ ವರ್ಣಿಸುತ್ತಾರೆ:

ಹಲವಾರು ಕ್ರಿಯೆಗಳು ನಮ್ಮ ಪ್ರಜ್ಞೆಯ ಅರಿವಿಗೆ ಬರುವುದಿಲ್ಲ. ಕೆಲವು ಪ್ರಜ್ಞೆಯ ಕೆಳಗೆ ಇರುವಂಥವು. ಉದಾಹರಣೆಗೆ ಪಚನಕ್ರಿಯೆ ಮುಂತಾದ ದೇಹದ ಒಳಗೆ ನಡೆಯುವ ಕ್ರಿಯೆಗಳು. ಇನ್ನು ಕೆಲವು ನಮ್ಮ ಸಾಮಾನ್ಯ ಪ್ರಜ್ಞೆಗೆ ಅತೀತವಾಗಿ ಇರುವಂಥವು. ಎರಡರಲ್ಲೂ 'ನಾನು ಮಾಡುತ್ತಿದ್ದೇನೆ' ಎಂಬ ಅಹಂಕಾರ ಭಾವನೆಯಿರುವುದಿಲ್ಲ. ಮಧ್ಯಮ ಸ್ತರದಲ್ಲಿ ಮಾತ್ರ ಆ ಭಾವನೆ ಇರುತ್ತದೆ. ಯಾವಾಗ ಮನಸ್ಸು 'ನಾನು' ಎಂಬ ಭಾವನೆಯನ್ನು ಮೀರುತ್ತದೆಯೋ, ಆಗ ಅದಕ್ಕೆ **ಸಮಾಧಿ** ಅಥವಾ ಪ್ರಜ್ಞಾತೀತಾವಸ್ಥೆ ಎಂದು ಹೆಸರು. ಸಮಾಧಿಯ ಸ್ಥಿತಿಗೆ ಹೋದವನು ಬರುವಾಗ ಜ್ಞಾನಿಯಾಗಿ, ಧರ್ಮಾತ್ಮನಾಗಿ, ಋಷಿಯಾಗಿ, ದೇವದೂತನಾಗಿ ಹಿಂತಿರುಗುತ್ತಾನೆ. ಅದಕ್ಕೆ ವಿರುದ್ಧವಾಗಿ, ಪ್ರಜ್ಞೆಯ ಕೆಳಗಿನ ಸುಪ್ತಾವಸ್ಥೆಗೆ ಹೋಗಿಬಂದವನು ಸಾಮಾನ್ಯನಾಗಿಯೇ ಉಳಿಯುತ್ತಾನೆ. ಸಮಾಧಿಯಿಂದ ಹಿಂತಿರುಗುವಾಗ ಬರುವ ಜ್ಞಾನವು ಜಾಗೃತಾವಸ್ಥೆಯಲ್ಲಿ ಯುಕ್ತಿಪೂರ್ಣವಾಗಿ ಬರುವ ಜ್ಞಾನಕ್ಕಿಂತ ಬಹಳ ಮೇಲುಮಟ್ಟಕ್ಕೆ ಸೇರಿದ್ದು. ಆದ್ದರಿಂದಲೇ ಇದನ್ನು ಪ್ರಜ್ಞಾತೀತಾವಸ್ಥೆ ಎನ್ನುವರು. ಯುಕ್ತಿ ಅಥವಾ ತರ್ಕಕ್ಕೆ ಮೀರಿದ ಜ್ಞಾನವು ಸಮಾಧಿ ಅವಸ್ಥೆಯಲ್ಲಿದ್ದಾಗ ಮಾತ್ರ ಸಾಧ್ಯ.

ಅಂತಹ ಸ್ಥಿತಿಯನ್ನು ಏರಿದ ಜ್ಞಾನಿಗೆ ತರ್ಕಾತೀತ ಜ್ಞಾನ, ಅತಿಭೌತಿಕ ಅಥವಾ ಅಚಿಂತ್ಯಜ್ಞಾನ ಉಂಟಾಗುವುದು. ಯಾವಾಗ ಧ್ಯಾನಾವಸ್ಥೆಯು ತೀವ್ರವಾಗಿ, ಮನಸ್ಸಿನ ಏಕಾಗ್ರತೆಯು ಬಾಹ್ಯ ಇಂದ್ರಿಯಗ್ರಹಣವನ್ನೂ ತ್ಯಜಿಸುವಷ್ಟು ತೀವ್ರವಾಗುತ್ತದೆಯೋ, ಆಗ ಸಮಾಧಿ ಒದಗಿಬರುವುದು. ಆಗ ಅಂತರಂಗ ಅಥವಾ 'ಅರ್ಥ' ದಲ್ಲಿ (ಧ್ಯಾನವಸ್ತು) ಮಾತ್ರ ಮನಸ್ಸು ತಲ್ಲೀನವಾಗುವುದು.

ಸ್ವಾಮೀಜಿ ಸಮಾಧಿಯ ಸ್ಥಿತಿಯನ್ನು ಹೀಗೆ ಕೊಂಡಾಡುವರು: "ಸಮಾಧಿ ಪ್ರತಿಯೊಬ್ಬ ಮಾನವನ ಮಾತ್ರವಲ್ಲ, ಪ್ರತಿಯೊಂದು ಪ್ರಾಣಿಯ ಜನ್ಮಸಿದ್ಧ ಹಕ್ಕು. ಕ್ಷುದ್ರ ಮೃಗದಿಂದ ಹಿಡಿದು, ಪರಮ ದೇವನವರೆಗೆ ಪ್ರತಿಯೊಬ್ಬರೂ ಆ ಸ್ಥಿತಿಗೆ ಏರಲೇಬೇಕು. ಆಗ ಮಾತ್ರ ನಿಜವಾದ ಧರ್ಮ ಅಂತಹ ವ್ಯಕ್ತಿಗೆ ಪ್ರಾರಂಭವಾಗುವುದು."

ಧಾರಣ, ಧ್ಯಾನ ಮತ್ತು ಸಮಾಧಿಗಳನ್ನು ಒಟ್ಟಾರೆ 'ಸಂಯಮ' ಎಂದು ಯೋಗದ ಪರಿಭಾಷೆಯಲ್ಲಿ ಕರೆಯುತ್ತಾರೆ. ಈ ಮೆಟ್ಟಿಲುಗಳನ್ನು ಸ್ವಾಮೀಜಿ ಹೀಗೆ ಹೇಳಿಕೊಡುತ್ತಾರೆ: ಮೊದಲು ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸಬೇಕು. ಅನಂತರ ಸ್ವಲ್ಪಕಾಲದವರೆಗೆ ಏಕಾಗ್ರತೆಯಲ್ಲಿ ಮುಂದುವರಿಯಲು ಸಾಧ್ಯವಾಗಬೇಕು, ಅನಂತರ ಸತತವಾದ ಏಕಾಗ್ರತೆಯ ಮೂಲಕ, ವಸ್ತು ನಮಗೆ ಕಾಣುವಂತೆ ಮಾಡಿದ ಇಂದ್ರಿಯ ಗ್ರಹಣದ ಅಂತರಂಗದ ಮೇಲೆ ಕೇಂದ್ರೀಕರಿಸುವ ಸಾಮರ್ಥ್ಯ ಸಿದ್ಧಿಸುತ್ತದೆ. ಆಗ ಸರ್ವವೂ ಮನಸ್ಸಿನ ವಶವಾಗುತ್ತದೆ.

# ಶ್ರೀಮಧ್ವಾಚಾರ್ಯರ ಜೀವನ ಮತ್ತು ಸಂದೇಶದ ಮಹತ್ವ

ಡಾ. ಜಿ.ವಿ. ಕುಲಕರ್ಣಿ



ಭಾರತೀಯ ತತ್ತ್ವಶಾಸ್ತ್ರದ ಪ್ರಸಿದ್ಧವಾದ ಮತಗಳೆಂದರೆ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ. ಇವುಗಳ ಪ್ರಣೇತೃಗಳಾದ ಆಚಾರ್ಯರು ಶಂಕರ, ರಾಮಾನುಜ, ಮಧ್ವರು. ಇವರು ಬಾಳಿ ಬೆಳಗಿದ್ದು ಎಂಟು, ಹನ್ನೆರಡು ಹಾಗೂ ಹದಿಮೂರನೆಯ ಶತಮಾನಗಳಲ್ಲಿ. ಶ್ರೀಶಂಕರರು ಹುಟ್ಟಿದ್ದು ಕೇರಳದಲ್ಲಿ, ಶ್ರೀರಾಮಾನುಜರು ಜನಿಸಿದ್ದು ತಮಿಳುನಾಡಿನಲ್ಲಿ, ಶ್ರೀಮಧ್ವಾಚಾರ್ಯರು ಹುಟ್ಟಿದ್ದು ಕರ್ನಾಟಕದ ಪಾಜಕ ಕ್ಷೇತ್ರದಲ್ಲಿ. ಆದರೆ, ಈ ಮೂವರು ಮಹಾತ್ಮರಿಗೂ ತಮ್ಮ ತಮ್ಮ ಸಾಧನೆಯನ್ನು ಮಾಡಲು ಆಶ್ರಯ ನೀಡಿದ ಪುಣ್ಯಭೂಮಿ ಕರ್ನಾಟಕ. ಶಂಕರರು ಶೃಂಗೇರಿಯಲ್ಲಿ, ರಾಮಾನುಜರು ಮೇಲುಕೋಟೆಯಲ್ಲಿ, ಮತ್ತು ಮಧ್ವರು ಉಡುಪಿಯಲ್ಲಿ ನೆಲೆಸಿ ತಮ್ಮ ಮತಗಳನ್ನು ಬೋಧಿಸಿದರು.

ಬೌದ್ಧಮಯವಾಗಿದ್ದ ಭಾರತದಲ್ಲಿ ಶಂಕರರು ಉದಯಿಸಿ ವೈದಿಕಧರ್ಮದ ಪುನರುತ್ಥಾನವನ್ನು ಕೈಕೊಂಡರು. ಸ್ವರ್ಗಾಭಿಲಾಷೆಯಿಂದ ಮಾಡುವ ಯಜ್ಞಯಾಗಾದಿಗಳಿಂದ ದೂರಾಗಲು ವೇದವನ್ನು ಕರ್ಮಕಾಂಡ, ಜ್ಞಾನಕಾಂಡಗಳೆಂದು ವಿಭಾಗಿಸಿದರು; ಜಗತ್ತು ಮಿಥ್ಯ ಎಂದರು; ಅದ್ವೈತವನ್ನು ಸಾಧಿಸಿದರು. ಮಧ್ವರು ಯಜ್ಞದಲ್ಲಾಗುವ ಪಶುಹಿಂಸೆ ತಪ್ಪಿಸಲು ಹಿಟ್ಟಿನ ಪಶುಬಲಿಯ ಸಂಪ್ರದಾಯವನ್ನು ತಂದು ವೇದಗಳಿಗೂ ಪಾಂಚರಾತ್ರಕ್ಕೂ ಸಮನ್ವಯ ಸಾಧಿಸಿದರು. ರಾಮಾನುಜಾಚಾರ್ಯರು ಪಾಂಚರಾತ್ರವನ್ನು ಒಪ್ಪಿಕೊಂಡು ಭಕ್ತಿಗೆ ಪ್ರಾಧಾನ್ಯ ನೀಡಿದರು. ಇನ್ನೂ ಮುಂದುವರಿದು, ಶ್ರೀಮಧ್ವಾಚಾರ್ಯರು ಬ್ರಹ್ಮಸೂತ್ರಗಳಲ್ಲಿ ಭಕ್ತಿಗಿರುವ ಸ್ಥಾನವನ್ನು ಕಂಡುಹಿಡಿದರು. ಇದೇ ಅವರ ಹೆಗ್ಗಳಿಕೆ. ರಾಮಾನುಜರು ಇಡೀ ರಾಷ್ಟ್ರದಲ್ಲಿ ಛಿದ್ರವಿಚ್ಛಿದ್ರವಾಗಿ ಹೋದ ಆಧ್ಯಾತ್ಮಿಕ ಪ್ರಜ್ಞೆಗೆ ಅನುಭೂತಿಯ ಒಂದು ಸಮಾನ ರೂಪವನ್ನು ನೀಡಲು ಪ್ರಯತ್ನಿಸಿದರೆ, ಶ್ರೀಮಧ್ವರು ಅದಕ್ಕೆ ಅಖಂಡತೆಯ ಒಂದು ಶಾಶ್ವತ ಮೌಲಿಕತೆಯನ್ನು ಒದಗಿಸಿದರು. ನಿಜವಾಗಿ ಆಧ್ಯಾತ್ಮಿಕತೆ ಎನ್ನಿಸುವ ಯಾವುದೇ ಅನುಭೂತಿ, ಸಾಧನೆ, ಸಿದ್ಧಿಗಳ ತಿರುಳನ್ನು ಶ್ರೀಮಧ್ವರು ನಿರಾಕರಿಸದೆ, ತಮ್ಮ ದ್ವೈತ ಸಿದ್ಧಾಂತದಲ್ಲಿ ಅವೆಲ್ಲಕ್ಕೂ ಸ್ಥಾನವನ್ನು ನೀಡಿದರು. ಪರಮಾತ್ಮನನ್ನು ಸಂಸಾರಿಗಳ, ಮುಕ್ತರ, ಮರ್ತ್ಯರ ಹಾಗೂ ಅಮರ್ತ್ಯರ ಪರಮಪ್ರಭುವಾಗಿರಿಸಿ ಮುಕ್ತಿಯಲ್ಲಿಯೂ, ನಿಷ್ಕಾಮ ಆನಂದಾತಿಶಯಕಾರಣವಾದ ಲೀಲಾ ಕರ್ಮವಿರುವ ಅನಂತ ಜೀವನವನ್ನು ತೆರೆದು ತೋರಿಸಿದರು.

**ಭಾರತೀಯ ಆಧ್ಯಾತ್ಮಿಕ ಮತ್ತು ತಾತ್ತ್ವಿಕ ಇತಿಹಾಸದಲ್ಲಿ ಶಂಕರ, ರಾಮಾನುಜ ಮತ್ತು ಮಧ್ವ – ಈ ತ್ರಿಮತಸ್ಥ ಆಚಾರ್ಯರ ಪಾತ್ರ ಬಹಳ ಮುಖ್ಯವಾದುದು. ಆಯಾ ಕಾಲದ ಸನ್ನಿವೇಶಕ್ಕೆ ತಕ್ಕಹಾಗೆ ಜನಸಾಮಾನ್ಯರಲ್ಲಿ ಆಧ್ಯಾತ್ಮಿಕ ಪ್ರಜ್ಞೆಯನ್ನು ಉದ್ಧರಿಸುವ ಮಹಾನ್ ಕಾರ್ಯವನ್ನು ಅವರುಗಳು ಮಾಡಿದರು. ಅಂಥ ಆಚಾರ್ಯಪುರುಷರಲ್ಲಿ ಕನ್ನಡನಾಡಿನಲ್ಲಿ ಜನ್ಮತಳೆದು, ದ್ವೈತಸಿದ್ಧಾಂತ ಪ್ರವರ್ತಕರಾದ ಶ್ರೀಮಧ್ವಾಚಾರ್ಯರ ಸ್ಥಾನ ವಿಶಿಷ್ಟವಾದುದು. ಅವರ ಜೀವನ ಮತ್ತು ಸಾಧನೆಯ ಮಹತ್ವವನ್ನು ವಿದ್ವತ್ಪೂರ್ಣವಾಗಿ ತಿಳಿಸಿಕೊಟ್ಟಿರುವ ಲೇಖಕರು ಮುಂಬೈ ನಗರದ ನಿವಾಸಿಗಳು, ಖ್ಯಾತ ಸಾಹಿತಿಗಳು.**

ಹಲವಾರು ಭಾರತೀಯ ತತ್ತ್ವಜ್ಞಾನಿಗಳು ಶ್ರೀಮಧ್ವದರ್ಶನವನ್ನು ಸರಿಯಾಗಿ ಗ್ರಹಿಸಲಿಲ್ಲ. ಅದಕ್ಕೆ ಅಪವಾದವೆಂಬಂತೆ, ಪ್ರಥಮಬಾರಿಗೆ ಶ್ರೀಮಧ್ವರ ತತ್ತ್ವಜ್ಞಾನಕ್ಕೆ ಗೌರವಯುತ ಸ್ಥಾನವನ್ನು ನೀಡಿದ ವಿದ್ವಾಂಸರೆಂದರೆ ಡಾ. ಸುರೇಂದ್ರನಾಥ ದಾಸಗುಪ್ತ. ಅವರು ತಮ್ಮ 'ಭಾರತೀಯ ತತ್ತ್ವಶಾಸ್ತ್ರದ ಚರಿತ್ರೆ' ಎಂಬ ಉದ್ಗ್ರಂಥದ ನಾಲ್ಕನೆಯ ಸಂಪುಟದಲ್ಲಿ ಶ್ರೀಮಧ್ವಾಚಾರ್ಯರ ಜೀವನ ಮತ್ತು ತತ್ತ್ವದರ್ಶನದ ಬಗ್ಗೆ ೨೫೦ ಪುಟಗಳನ್ನು ಮೀಸಲಾಗಿ ಇಟ್ಟಿದ್ದಾರೆ. ಅವರು

ತಮ್ಮ ಪ್ರಸ್ತಾವನೆಯಲ್ಲಿ ಶ್ರೀಮಧ್ವರ ಅನುಯಾಯಿಗಳಾದ ಶ್ರೀಜಯತೀರ್ಥ ಹಾಗೂ ಶ್ರೀವ್ಯಾಸತೀರ್ಥರ ಬಗ್ಗೆ ಈ ಮಾತುಗಳನ್ನು ಬರೆಯುತ್ತಾರೆ: "ನನ್ನ ಅಭಿಪ್ರಾಯದಲ್ಲಿ ಜಯತೀರ್ಥರು ಮತ್ತು ವ್ಯಾಸತೀರ್ಥರು ಭಾರತೀಯ ವೈಚಾರಿಕತೆಯಲ್ಲಿಯ ಅತ್ಯುತ್ತಮ ಮೀಮಾಂಸಾ ಕೌಶಲವನ್ನು ಮಂಡಿಸುತ್ತಾರೆ."

ಶ್ರೀ ದಾಸಗುಪ್ತ ಅವರ ಅನಂತರದಲ್ಲಿ ಶ್ರೀಮಧ್ವರ ಬಗ್ಗೆ ಇಂಗ್ಲಿಷ್ ಭಾಷೆಯಲ್ಲಿ ಗ್ರಂಥ ರಚಿಸಿದವರೆಂದರೆ, ಶ್ರೀ ಸಿ.ಎಂ. ಪದ್ಮನಾಭಾಚಾರ್ಯ ಅವರು. Life and Teachings of Madhvacharya ಎಂಬುದು ಅವರ ಗ್ರಂಥ (ಅದನ್ನು ಪ್ರೊ. ಆರ್.ಜಿ.ಕುಲಕರ್ಣಿಯವರು " ಶ್ರೀ ಮಧ್ವಾಚಾರ್ಯರ ಜೀವನ ಚರಿತ್ರೆ ಮತ್ತು ಉಪದೇಶವಾಣಿ" ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ). ಇನ್ನು ಕೆಲವು ಮಹತ್ವದ ಗ್ರಂಥಗಳನ್ನು ಇಂಗ್ಲಿಷಿನಲ್ಲಿ ರಚಿಸಿದವರೆಂದರೆ ಡಾ. ಬಿ. ಎನ್ .ಕೆ. ಶರ್ಮಾ ಅವರು. ಅವರ ಕೆಲವು ಗ್ರಂಥಗಳು ಹೀಗಿವೆ: (1) The Brahma Sutras and their Principal Commentaries- A Critical Exposition, 2) History of Dvaita School of Vedanta and Its Literature 3) Philosophy of Madhvacharya.

ಡಾ. ಎಸ್. ರಾಧಾಕೃಷ್ಣನ್ ಅವರು ಭಾರತೀಯ ತತ್ತ್ವಶಾಸ್ತ್ರದ ಬಗೆಗಿನ ತಮ್ಮ ಗ್ರಂಥದ ಎರಡನೆಯ ಆವೃತ್ತಿಯಲ್ಲಿ ಶ್ರೀಮಧ್ವರ ಬಗ್ಗೆ ಕೆಲವು ಉಪಯುಕ್ತ ಮಾಹಿತಿಯನ್ನು ಸೇರಿಸಿದ್ದಾರೆ. ಮಧ್ವದರ್ಶನವು ಬಂಗಾಳದ ವೈಷ್ಣವ ಪಂಥದ ಮೇಲೆ ಬಹು ದೊಡ್ಡದಾಗಿ ಪ್ರಭಾವ ಬೀರಿದೆ. ಛತ್ರಪತಿ ಶಿವಾಜಿ ಮಹಾರಾಜನ ಗುರುಗಳಾದ ಸಮರ್ಥ ರಾಮದಾಸರು ಶ್ರೀಮಧ್ವರ ಉಪದೇಶವನ್ನು ಅನುಸರಿಸಿದರು ಎಂದು ಹೇಳಲಾಗುತ್ತದೆ. ಅದರಂತೆ ಶ್ರೀವಲ್ಲಭ ಸಂಪ್ರದಾಯದ ಸಂಸ್ಥಾಪಕರೆಂದು ಹೆಸರಾದ ಶ್ರೀವಿಷ್ಣುಸ್ವಾಮಿಗಳು (೧೪ ನೆಯ ಶತಮಾನ), ಕೃಷ್ಣ ಚೈತನ್ಯ (೧೬ ನೆಯ ಶತಮಾನ), ಬಲದೇವ (೧೮ ನೆಯ ಶತಮಾನ) ಮುಂತಾದವರು ಮಧ್ವದರ್ಶನದ ಮುಖ್ಯಾಂಶಗಳಿಂದ ಪ್ರಭಾವಿತರಾಗಿರುವ ವಿಷಯವನ್ನು ಡಾ. ರಾಧಾಕೃಷ್ಣನ್ ಎತ್ತಿತೋರಿಸಿದ್ದಾರೆ.

ಶ್ರೀಮಧ್ವರು (ಜನ್ಮನಾಮ 'ವಾಸುದೇವ') ಉಡುಪಿಯ ಬಳಿಯಲ್ಲಿರುವ ಪಾಜಕ ಕ್ಷೇತ್ರದಲ್ಲಿ ಮಧ್ಯಗೇಹ ಭಟ್ಟ ಹಾಗೂ ವೇದವತಿಯ ಪುತ್ರರಾಗಿ ಜನಿಸಿದರು (೧೨೩೮). ಯತಿವರೇಣ್ಯ ಶ್ರೀ ಅಚ್ಯುತಪ್ರೇಕ್ಷರ ಶಿಷ್ಯರಾಗಿ, ಸಂನ್ಯಾಸದೀಕ್ಷೆ ಪಡೆದು "ಪೂರ್ಣಪ್ರಜ್ಞ" ಎಂಬ ಹೆಸರು ಪಡೆದರು. ಮುಂದೆ ಆ ಪೀಠವನ್ನು ಇವರು ಅಲಂಕರಿಸಿದಾಗ "ಆನಂದತೀರ್ಥ" ಎಂಬ ಹೆಸರಿನಿಂದ ಪ್ರಸಿದ್ಧರಾದರು. ಸರ್ವಶಾಸ್ತ್ರಗಳಲ್ಲಿ ಪಾರಂಗತರಾಗಿ ಸರ್ವಜ್ಞರೆಂದು ಪ್ರಸಿದ್ಧಿಪಡೆದರು. ಪ್ರಾರಂಭದಲ್ಲಿ, ವಿದ್ಯಾರ್ಥಿದೆಸೆಯಲ್ಲಿ ಅವರು ತಮ್ಮ ಗುರುಗಳ ಬಳಿಯಲ್ಲಿ ಶಾಂಕರ ಭಾಷ್ಯವನ್ನೇ ಅಭ್ಯಸಿಸಿದರು. ಅನತಿಕಾಲದಲ್ಲಿ ಅವರು ಅದಕ್ಕೆ ವಿರುದ್ಧವಾದ ತಮ್ಮದೇ ವಿಚಾರಪದ್ಧತಿಯನ್ನು ಮಂಡಿಸಿದರು. ಇವರಿಗಿಂತ ಮೊದಲು ೨೧ ಜನರು ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆದಿದ್ದರು. ಇವರು ೨೨ ನೆಯ ಭಾಷ್ಯವನ್ನು ರಚಿಸಿದರು. ಇವರು ಉಡುಪಿಯಲ್ಲಿರುವಾಗಲೇ ತಮ್ಮ ಗುರುಗಳನ್ನು ಕಾಣಲು ಬಂದ ಅದ್ವೈತ ಮತಾನುಯಾಯಿಗಳನ್ನು ವಾದದಲ್ಲಿ ಸೋಲಿಸಿದರು. ಗುರು ಅಚ್ಯುತಪ್ರೇಕ್ಷರೊಂದಿಗೆ ದಕ್ಷಿಣದೇಶದ ಪ್ರವಾಸ ಮಾಡಿದರು. ರಾಮೇಶ್ವರದಲ್ಲಿ ವಿಷ್ಣುಪೂಜೆ ಮಾಡಿದರು.

ಮಿಥ್ಯಾವಾದವನ್ನು ಧ್ವಂಸ ಮಾಡಲೆಂದು ವಾಯುದೇವರೇ ಶ್ರೀಮಧ್ವರಾಗಿ ಅವತರಿಸಿದರೆಂದು ಅವರ ಜೀವನಚರಿತ್ರೆಯಾದ ಸುಮಧ್ವವಿಜಯವು ಸಾರುತ್ತದೆ. ಶ್ರೀಮಧ್ವರು ಸಂನ್ಯಾಸವನ್ನು ಸ್ವೀಕರಿಸಿದ ನಂತರ ಏಳು ವರ್ಷಗಳ ಕಾಲ ದಕ್ಷಿಣದೇಶದಲ್ಲಿ ಸಂಚಾರ ಮಾಡಿದರು. ವಾದಿಸಿಂಹ, ವಾಸುದೇವ, ಬುದ್ಧಿಸಾಗರ ಮೊದಲಾದ ಪಂಡಿತರನ್ನು ವಾದದಲ್ಲಿ ಸೋಲಿಸಿದರು. ಆಗ ಎಲ್ಲ ಕಡೆಯ ಪಕ್ಷದವರು "ಬರಿ ವಾದದಲ್ಲಿ ಗೆಲವು ಸಾಧಿಸಿದರೆ ಸಾಲದು, ತತ್ತ್ವಸಾಧನೆ ಮಾಡಲು ಪುರಾತನ ಶಾಸ್ತ್ರಗ್ರಂಥಗಳಿಗೆ ವ್ಯಾಖ್ಯಾನ ಬರೆದು ತೋರಿಸಬೇಕು" ಎಂದು ಅವರಿಗೆ ಆಹ್ವಾನ ನೀಡಿದರು. ಅದಕ್ಕಾಗಿ ಅವರು ಮೊದಲು ಆರಿಸಿಕೊಂಡ ಕೃತಿ 'ಶ್ರೀಮದ್ ಭಗವದ್ಗೀತೆ.'

ಪೂರ್ವಾಚಾರ್ಯರುಗಳು ಗೀತೆಯ ಅರ್ಥವನ್ನು ಹೊರತೆಗೆಯಲು ಈಗಾಗಲೇ ಪರಿಶ್ರಮಿಸಿದ್ದರು. ಶ್ರೀಮಧ್ವರು ದಕ್ಷಿಣ ಯಾತ್ರೆಯಿಂದ ಮರಳಿದ ಮೇಲೆ, ಶ್ರೀಕೃಷ್ಣನ ಬೋಧಾಮೃತವನ್ನು ಪಡೆಯಲು ಮತ್ತು ಗೀತಾ ತತ್ತ್ವರತ್ನಗಳನ್ನು ಶೋಧಿಸಲು, ಇನ್ನಷ್ಟು ಆಳಕ್ಕೆ ಇಳಿದು ಬಹ್ವರ್ಥಗರ್ಭಿತವಾದ ಗೀತಾಭಾಷ್ಯವನ್ನು ರಚಿಸಿದರು. ಅನಂತರ ಬದರಿಯಾತ್ರೆಯನ್ನು ಕೈಕೊಂಡರು. ಬದರಿಯಲ್ಲಿದ್ದಾಗ ಶ್ರೀವೇದವ್ಯಾಸರು ಅವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ತಮ್ಮ ಆಶ್ರಮಕ್ಕೆ ಬರಬೇಕೆಂದು ಆಹ್ವಾನಿಸಿದರು. ಬೆಳಗಾದೊಡನೆ ಶ್ರೀಮಧ್ವರು ಪ್ರಯಾಣಕ್ಕೆ ಸಿದ್ಧರಾದರು. ಶ್ರೀವೇದವ್ಯಾಸರ ಪ್ರತ್ಯಕ್ಷದರ್ಶನ ಪಡೆದು, ಅವರ ಗಾಢಾಲಿಂಗನ ಹೊಂದಿ ಪರಮಾನಂದಭರಿತರಾದರು, ಮೈಪುಲಕಿತಗೊಂಡು ನಲಿದಾಡಿದರು. ಶ್ರೀಮಧ್ವರಿಗೆ ಆಶ್ರಮದಲ್ಲಿ ಆದರದ ಸ್ವಾಗತ ದೊರೆಯಿತು. ಭಗವಂತನ ಅವತಾರವಾದ ವೇದವ್ಯಾಸರನ್ನು ಕಂಡು ತಮ್ಮ ಗೀತಾಭಾಷ್ಯವನ್ನು ಅವರಿಗೆ ತೋರಿಸಿದರು. ವೇದವ್ಯಾಸರು ಇವರು ಬರೆದ ಗೀತಾಭಾಷ್ಯವನ್ನು ಮೆಚ್ಚಿದರು. ಅದರಲ್ಲಿ ಶ್ರೀಮಧ್ವರು ತಾವು ತಮ್ಮ ಶಕ್ತ್ಯನುಸಾರ ವಿವರಣೆ ಕೊಟ್ಟಿರುವುದಾಗಿ ಬರೆದಿದ್ದರು. ಅಲ್ಲಿಯ "ಶಕ್ತಿತಃ" (ಶಕ್ತ್ಯನುಸಾರ) ಎಂಬ ಶಬ್ದವನ್ನು ಬದಲಿಸಿ "ಲೇಶತಃ" (ಸ್ವಲ್ಪಮಟ್ಟಿಗೆ) ಎಂದು ತಿದ್ದಲು ವೇದವ್ಯಾಸರು ಹೇಳಿದರು. ಇದು ಶ್ರೀಮಧ್ವರಿಗೆ ಮಹರ್ಷಿಗಳಿಂದ ದೊರೆತ ಪ್ರಶಂಸೆಯಾಗಿತ್ತು.

ಹಾಗೆಯೇ ವೇದವ್ಯಾಸರು ಶ್ರೀಮಧ್ವರಿಗೆ ಬ್ರಹ್ಮಸೂತ್ರಗಳಿಗೆ ಕೂಡ ಭಾಷ್ಯ ಬರೆಯಲು ಆಜ್ಞಾಪಿಸಿದರು. ಶ್ರೀಮಧ್ವರ ಪ್ರಿಯಶಿಷ್ಯರಾದ ಸತ್ಯತೀರ್ಥರು ಲಿಪಿಕಾರರಾದರು. ಮಾರ್ಗಮಧ್ಯದಲ್ಲಿಯೇ ಗ್ರಂಥ ರಚಿತವಾಯಿತು. ಒಂದು ಪ್ರತಿಯನ್ನು ತಮ್ಮ